**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

# **ಸಿ.ಸಿ. ನಂ.1027/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮಾರುತೇಶ | ಸಿ.ಡಬ್ಲ್ಯೂ -1 |
| ತಂದೆ/ ಗಂಡನ ಹೆಸರು | : | ಸೂರ್ಯನಾರಾಯಣ | ಪಿ.ಡಬ್ಲ್ಯೂ -1 |
| ವಯಸ್ಸು | : | 62 ವರ್ಷ | |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಚಳ್ಳಕೆರೆ | ದಿಃ19-07-2025. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ಸುಮಾರು 40 ವರ್ಷದಿಂದ ಪಾವಗಡ ರಸ್ತೆಯಲ್ಲಿ ಗಾಡ್ರೇಜ್ ತಯಾರಿಸುವ ವರ್ಕ ಶಾಪ್ ನಡೆಸುತ್ತಿದ್ದೇನೆ. ಈಗ 4 ವರ್ಷಗಳ ಹಿಂದೆ ನಾನು ನಮ್ಮ ಮನೆಯಲ್ಲಿದ್ದಾಗ ನಾನು ಬೆಳಿಗ್ಗೆ 9-00 ಆರೋಪಿತರು ಜೆಸಿಬಿಯನ್ನು ತಂದು ನಮ್ಮ ವರ್ಕ ಶಾಪ್ ನ ಪೂರ್ವ ಭಾಗದಲ್ಲಿ ಕೆಡವುತ್ತಿರುವ ವಿಚಾರವನ್ನು ಅಲ್ಲಿ ಕೆಲಸ ಮಾಡುವ ಹುಡುಗರು ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಆಗ ನಾನು ಮತ್ತು ಚಾಸಾ-4 ಸ್ಥಳಕ್ಕೆ ಸುಮಾರು 10-00 ರಿಂದ 10-30 ಕ್ಕೆ ಹೋಗಿ ನೋಡಲಾಗಿ ಜೆಸಿಬಿಯಿಂದ ನಮ್ಮ ವರ್ಕ ಶಾಪ್ ಗೋಡೆಯನ್ನು ಒಡೆಯುತ್ತಿದ್ದರು. ಅದನ್ನು ನಾವು ತಡೆದಿರುತ್ತೇವೆ. ಆರೋಪಿತರ ಅದು ನಮ್ಮ ಜಾಗ ಎಂದು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. ಅದಕ್ಕೆ ಜಾಗ ನಿಂದು ಎಂದು ತೋರಿಸಲು ದಾಖಲೆ ಕೇಳಿರುತ್ತೇನೆ. ಆದರೂ ಸಹ ಅವರು ದೌರ್ಜನ್ಯದಿಂದ ಗೋಡೆಯನ್ನು ಕೆಡವಿರುತ್ತಾರೆ. ನನ್ನನ್ನು ಹಾಗೂ ಚಾಸಾ-4 ರವರನ್ನು ತಳ್ಳಾಡಿರುತ್ತಾರೆ. ಆಗ ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿರುತ್ತಾರೆ. ಗೋಡೆಯನ್ನು ಕೆಡವಿದ್ದರಿಂದ ನಮಗೆ ಸುಮಾರು ರೂ.1 ಲಕ್ಷ ದಷ್ಟು ನಷ್ಟವಾಗಿರುತ್ತದೆ. ನಂತರ ನಾನು ಪೊಲೀಸ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿಃ 1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ದೂರು ದಾಖಲಿಸಿದ ದಿನದಂದೇ ಪೊಲೀಸರು ಮಧ್ಯಾಹ್ನ ಸುಮಾರು 2 ಗಂಟೆಗೆ ಸ್ಥಳಕ್ಕೆ

ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಮಹಜರ ಕ್ರಮ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ



ನಾನು, ಚಾಸಾ-4 ರಿಂದ 6 ರವರು ಹಾಗೂ ಬೇರೆ ಜನರು ಹಾಜರಿದ್ದೇವು. ಪೊಲೀಸರು ಸ್ಥಳದಲ್ಲಿ ಇಟ್ಟಿಗೆಯನ್ನು ತೆಗೆದುಕೊಂಡಿರುತ್ತಾರೆ.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಸಿಮೆಂಟ್ ಇಟ್ಟಿಗೆಯ ತುಂಡನ್ನು ನೋಡಿ ಪೊಲೀಸರು ವಶಪಡಿಸಿಕೊಂಡ ವಸ್ತು ಎಂದು ಗುರುತಿಸಿದ ಮೇರೆಗೆ ಸದರಿ ಇಟ್ಟಿಗೆಯ ತುಂಡನ್ನು ಮು.ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರುದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ</u>**

ಆರೋಪಿತರು ನಾವು ಸ್ಥಳಕ್ಕೆ ಹೋದಾಗ ನಮ್ಮನ್ನು ತಡೆದಿರುತ್ತಾರೆ ಎಂದರೆ ಸರಿ. ಮಹಜರ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದು, ನಿಪಿಃ2 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಆರ್ ಎಸ್ ಎಂ., ಆರೋಪಿತ ಪರ ವಕೀಲರಿಂದಃ</u>**

ನಮ್ಮ ವರ್ಕ ಶಾಪ್ ನಂ.1584/ಸಿ ಎಂದು ಇರಬಹುದು. ಸದರಿ ವರ್ಕ ಶಾಪ್ ಜಾಗವನ್ನು 1 ನೇ ಆರೋಪಿಯಿಂದ ಖರೀದಿಸಿರುತ್ತೇನೆ. ನಾನು 20*250 ಅಡಿ ಜಾಗವನ್ನು ಖರೀದಿಸಿರುತ್ತೇನೆ. ನಾನು ಖರೀದಿ ಮಾಡಿದ ಜಾಗದ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಪ್ರಸಾದರವರ ಜಾಗ, ಉತ್ತರಕ್ಕೆ 1 ನೇ ಆರೋಪಿಯ ಮಿಲ್ ಜಾಗ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಪೂರ್ವಕ್ಕೆ ಇರುವ ಖಾಲಿ ಜಾಗವು 1 ನೇ ಆರೋಪಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಜಾಗವು ಕೃಷ್ಣರೆಡ್ಡಿಯವರಿಗೆ ಸೇರಿರುತ್ತದೆ. ಪೂರ್ವಕ್ಕೆ ಇರುವ ಜಾಗ 1 ನೇ ಆರೋಪಿಗೆ ಸೇರಿದ್ದು, ಸದರಿ ಜಾಗದಲ್ಲಿ ಅವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿದ ಕಾರಣ 1 ನೇ ಆರೋಪಿ ನನ್ನ ವಿರುದ್ಧ ಅಸಲು ದಾವಾ

ನಂ.101/2019 ರ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ



ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿತ್ತು ಎಂದರೆ ಸರಿ. ಸದರಿ ಆದೇಶದ ವಿಚಾರ ನನಗೆ ತಿಳಿದಿರುತತದೆ. ನಾನು ದೌರ್ಜನ್ಯದಿಂದ ಒತ್ತುವರಿ ಮಾಡಿ ಗೋಡೆಯನ್ನು ನಿರ್ಮಿಸಿದ್ದರಿಂದ ಮತ್ತೆ ಮುಂದುವರಿದು ಕಟ್ಟಡವನ್ನು ನಿರ್ಮಿಸಬಾರದು ಹಾಗೂ ಸ್ವಾಧೀನಕ್ಕೆ ಅಡ್ಡಿಪಡಿಸಬಾರದೆಂದು ನ್ಯಾಯಾಲಯವು ಪೊಲೀಸ ಸಹಾಯ ಪಡೆಯಲು ಆದೇಶ ನೀಡಿತ್ತು ಎಂದರೆ ಸರಿ. ಸದರಿ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಆರೋಪಿಯು ನ್ಯಾಯಾಲಯದ ಆದೇಶದ ರೀತ್ಯಾ ನಡೆದುಕೊಳ್ಳುವಂತೆ ನನ್ನ ವಿರುದ್ಧ ಚಳ್ಳಕೆರೆ ಪೊಲೀಸ ಠಾಣೆಯಲ್ಲಿದೂರು ನೀಡಿದ್ದು, ಅದರಂತೆ ನನ್ನನ್ನು ಪೊಲೀಸ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಪೊಲೀಸ ಠಾಣೆಯಲ್ಲಿ ನನಗೆ ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ನನಗೆ ಬುದ್ಧಿವಾದ ಹೇಳಿದರು ಎಂದರೆ ಸಾಕ್ಷಿಯು ನಾನು ಪೊಲೀಸ ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಗೋಡೆಯನ್ನು ಕೆಡವಿದರು ಎಂದು ಹೇಳಲು ಆಗವುದಿಲ್ಲ. ನಾನು ನಮ್ಮ ವರ್ಕ್ ಶಾಪ್ ಗೆ ಹೇಳಿದ ಚೆಕ್ ಬಂದಿಯಲ್ಲಿಯೇ ಆರೋಪಿಯನ್ನು ಗೋಡೆಯನ್ನು ಕೆಡವಿರುತ್ತಾರೆ. ಕೆಡವಿದ ಗೋಡೆಯ ಚೆಕ್ ಬಂದಿ ಪಶ್ಚಿಮಕ್ಕೆ ನಮ್ಮ ಕಟ್ಟಡದ ಒಳಭಾಗವಿದ್ದು ಬೀರುಗಳು ಇಡಲಾಗಿರುತ್ತದೆ, ಉತ್ತರಕ್ಕೆ ನನಗೆ ಸೇರಿದ ಕಟ್ಟಡ, ದಕ್ಷಿಣಕ್ಕೆ ನನಗೆ ಸೇರಿದ ಸಂಪೂರ್ಣವಾಗದ ಕಟ್ಟಡ, ಪೂರ್ವಕ್ಕೆ ಜನರು ಓಡಾಡುವ ಖಾಲಿ ಜಾಗ. ಸದರಿ ಚೆಕ್ ಬಂದಿಯಲ್ಲ ಆರೋಪಿತರು ಗೋಡೆಯನ್ನು ಕೆಡವಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಚಾಸಾ-5 ಅಥವಾ 6 ರವರು ದೂರವಾಣಿ ಕರೆ ಮಾಡಿರಬಹುದು. ಸದರಿ ವಿಚಾರವಾಗಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ಮೊಬೈಲ್ ನಂಬರ ಹೇಳಲು ಆಗುವುದಿಲ್ಲ. ಸುಮಾರು 9-30 ರಿಂದ 10-00 ಗಂಟೆ ಸಮಯದಲ್ಲಿ ಕರೆ ಬಂದಿರುತ್ತದೆ.

ಜೆಸಿಬಿ ವಾಹನದ ನೋಂದಣಿ ಸಂಖ್ಯೆ ಹಾಗೂ ಚಾಲಕನ ಹೆಸಸರು ಹೇಳಲು ಆಗುವುದಿಲ್ಲ. ಸದರಿ ಜೆಸಿಬಿಯನ್ನು 1 ನೇ ಆರೋಪಿ ತಂದಿರುತ್ತಾರೆ. 9-30 ರಿಂದ 10-00 ಗಂಟೆ ಸಮಯದಲ್ಲಿ ನಾನು ಸ್ಥಳಕ್ಕೆ ಹೋದಾಗ ಇನ್ನೂ ಜೆಸಿಬಿಯಲ್ಲಿ ಕಟ್ಟಡವನ್ನು ಕೆಡವುತ್ತಿದ್ದರು. ಆರೋಪಿತರು ಕಟ್ಟಡವನ್ನು ಕೆಡವುತ್ತಿದ್ದಾಗ ನಾನು ಮತ್ತು ಚಾಸಾ-4 ರವರು ಹೋಗಿ ತಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಮಹಜರ

ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-2



ಮತ್ತು 3 ರವರು ನಮ್ಮ ಬಳಿ ಕೆಲಸ ಮಾಡುತ್ತಾರೆ. ಆರೋಪಿತರುಚಾಸ ನನ್ನನ್ನು ಮತ್ತು ಚಾಸಾ-4 ರವರು ತಳ್ಳಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ರೂ.1 ಲಕ್ಷಗಳ ನಷ್ಟ ಉಂಟಾಗಿದೆ  ಎಂದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ಜಗಳವಾದ ದಿನದಂದೇ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿಃ1 ನ್ನು ನಾನೇ ಬರೆದಿರುತ್ತೇನೆ. ಸದರಿ ವಿಚಾರವಾಗಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಮಹಜರಿಗೆ ಬಂದಿರುತ್ತಾರೆ ಎಂದು ನೆನಪಿಲ್ಲ.

ಮಹಜರ ಮಾಡಿದ ಸ್ಥಳದ ಚೆಕ್ ಬಂದಿ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ವರ್ಕ್ ಶಾಪ್ ನಲ್ಲಿ ಮಹಜರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ ಮಾಡಿದ ಸಮಯ ನೆನಪಿಲ್ಲ. ನಿಪಿಃ2 ಕ್ಕೆ ನನ್ನನ್ನು ಹೊರತುಪಡಿಸಿ  ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮಹಜರ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ಚಾಸಾ-4 ರಿಂದ 6 ರವರು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ದಾರಿಯಲ್ಲಿ ಓಡಾಡುವ ಜನರು ಇದ್ದರು, ಅವರ ಹೆಸರು ಹೇಳಲು ಆಗುವುದಿಲ್ಲ.

ಸಾಮಾನ್ಯವಾಗಿ ಕೆಂಪು ಇಟ್ಟಿಗೆಯನ್ನು ಮಾತ್ರ ಇಟ್ಟಿಗೆ ಎಂದು  ಕರೆಯುತ್ತಾರೆ ಎಂದರೆ ಸಾಕ್ಷಿಯು ಸಿಮೆಂಟ್ ಇಟ್ಟಿಗೆ ಯನ್ನು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಮು.ಮಾ-1 ನ್ನು ಸ್ಥಳದಿಂದ ಪೊಲೀಸರು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ  ಎನ್ನಲಾದ ಸಮಯದಲ್ಲಿ ಆರೋಪಿತರು ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ನಂ.101/2019 ರ ದಾವೆಯ ಆದೇಶವನ್ನು ಉಲ್ಲಂಘಿಸಿದ್ದಕ್ಕೆ ನನ್ನ ವಿರುದ್ಧ ಸಿ.ಮಿಸ್ 04/2021 ರ ಅರ್ಜಿಯನ್ನು ಸಲ್ಲಿಸಿದ್ದು, ಅದು  ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಸದರಿ ಅರ್ಜಿಯು ಪುರಸ್ಕರವಾದರೇ ನಾನು ಜೈಲಿಗೆ ಹೋಗಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನೇ ಸ್ವತಃ  ಕಟ್ಟಡದ ಗೋಡೆಯನ್ನು ಕೆಡವಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ನನಗೆ ಹೇಳಿದಾಗ ನಾನೇ ಅವರ

ವಿರುದ್ಧ ಗಲಾಟೆ ಮಾಡಿದ್ದರಿಂದ ನನ್ನ ವಿರುದ್ಧ ಸಿಸಿ ನಂ.66/2022 ರ ಪ್ರಕರಣ ದಾಖಲಿಸಿದೆ



ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ